ಶಿವಮೊಗ್ಗ ಕ್ಷೇತ್ರದಲ್ಲಿ ಕೈಗೊಳ್ಳಲಾದ ವಿವಿಧ ಗ್ರಾಮೀಣ ನೀರು ಸರಬರಾಜು ಯೋಜನೆಗಳು

534 (4514) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2001ರಿಂದ ಈವರೆಗೆ ಕೈಗೊಳ್ಳಲಾದ ವಿವಿಧ ಗ್ರಾಮೀಣ ನೀರು ಸರಬರಾಜು ಯೋಜನೆಗಳು ಯಾವುವು: ಇದಕ್ಕೆ ವ್ಯಯಿಸಲಾದ ವೆಚ್ಚವೆಷ್ಟು:

ಆ) 2003–04ನೇ ಸಾಲಿನಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುವ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳು ಯಾವುವು: ವಿವರ ನೀಡುವುದು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಅನುಬಂಧ–1

(ಕರ್ನಾಟಕ ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 4514 ರ ಉತ್ತರದ ಲಗತ್ತು)

ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2001 ರಿಂದ ಈವರೆಗೆ ಕೈಗೊಳ್ಳಲಾದ ಗ್ರಾಮೀಣ ನೀರು ಸರಬರಾಜು ಯೋಜನೆಗಳ ವಿವರ

ಕ್ರ. ಸಂ.	ಯೋಜನೆ	ವೆಚ್ಚ (ರೂ. ಲಕ್ಷಗಳಲ್ಲಿ)	ಷರಾ
	ರಾಜ್ಯವಲಯ		
1	ಮಂಡೇಸಕೊಪ್ಪ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	9.35	ಕಾಮಗಾರಿ ಪೂರ್ಣಗೊಂಡಿದೆ
2	ದುಮ್ಮಳ್ಳಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	9.90	ಕಾಮಗಾರಿ ಪೂರ್ಣಗೊಂಡಿದೆ
3	ಕುಸ್ಕೂರು ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	8.50	ಭೌತಿಕವಾಗಿ ಪೂರ್ಣಗೊಂಡಿದೆ
4	ಲಕ್ಕಿನಕೊಪ್ಪ–ದೊಡ್ಡಿಬೀಳು ಗ್ರಾಮಕ್ಕ ಕೊಳವೆ ನೀರು ಸರಬರಾಯು ಯೋಜನೆ	2.65	ಕಾಮಗಾರಿ ಪ್ರಗತಿಯಲ್ಲಿದೆ
5	ಹೊಸಕೊಪ್ಪ ಗ್ರಾಮಕ್ಕೆ ಕೊಳವೆ ನೀರು ಸರಬರಾಜು (ಹೆಚ್ಚಿಸುವುದು) ಯೋಜನೆ	3.66	ಭೌತಿಕವಾಗಿ ಪೂರ್ಣಗೊಂಡಿದೆ
6	ಗಾಜನೂರು ಗ್ರಾಮದ ನೀರು ಸರಬರಾಜು ಪೈಪ್ ವಿಸ್ತರಣೆ	0.50	ಕಾಮಗಾರಿ ಪೂರ್ಣಗೊಂಡಿದೆ

ಕ್ರ. ಸಂ.	ಯೋಜನೆ	ವೆಚ್ಚ (ರೂ. ಲಕ್ಷಗಳಲ್ಲಿ)	ಷರಾ
7	ಲಿಂಗಾಪುರ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	2.53	ಭೌತಿಕವಾಗಿ ಪೂರ್ಣಗೊಂಡಿದೆ
8	ತೋಟದಕೆರೆ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	1.00	ಕಾಮಗಾರಿ ಪೂರ್ಣಗೊಂಡಿದೆ
9	ಬಿದರೆ ಆಶ್ರಯ ಕಾಲೋನಿಗೆ ಕಿರು ನೀರು ಸರಬರಾಜು ಯೋಜನೆ	1.50	ಭೌತಿಕವಾಗಿ ಪೂರ್ಣಗೊಂಡಿದೆ
10	ಜಯಂತಿ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	3.98	ಕಾಮಗಾರಿ ಪೂರ್ಣಗೊಂಡಿದೆ
11	ಹಸೂಡಿ ಫಾರಂಗೆ ಕೊಳವೆ ನೀರು ಸರಬರಾಜು ಯೋಜನೆ–ಪೈಪ್ ಲೈನ್	1.00	ಕಾಮಗಾರಿ ಪೂರ್ಣಗೊಂಡಿದೆ
	ಕೇಂದ್ರವಲಯ		
1	ಮಾಚೇನಹಳ್ಳಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	7.50	ಕಾಮಗಾರಿ ಪ್ರಗತಿಯಲ್ಲಿದೆ
2	ಸಿದ್ಧರಹಳ್ಳಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	4.34	ಕಾಮಗಾರಿ ಪ್ರತಿಯಲ್ಲಿದೆ
3	ಒತಿಗಟ್ಟ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	6.55	ಕಾಮಗಾರಿ ಪೂರ್ಣಗೊಂಡಿದೆ
4	ಸೋಗಾನ್ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	6.93	ಕಾಮಗಾರಿ ಪೂರ್ಣಗೊಂಡಿದೆ
5	ಹಸೂಡಿ ಫಾರಂ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	7.44	ಕಾಮಗಾರಿ ಪೂರ್ಣಗೊಂಡಿದೆ
6	ಹಾರೋಗಡ್ಡೆ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	2.30	ಕಾಮಗಾರಿ ಪೂರ್ಣಗೊಂಡಿದೆ
7	ವೀರಭದ್ರ ಕಾಲೋನಿಗೆ ಕಿರು ನೀರು ಸರಬರಾಜು ಯೋಜನೆ	2.34	ಕಾಮಗಾರಿ ಪೂರ್ಣಗೊಂಡಿದೆ

ಕ್ರ. ಸಂ.	ಯೋಜನೆ	ವೆಚ್ಚ (ರೂ. ಲಕ್ಷಗಳಲ್ಲಿ)	ಪರಾ
8	ಸಿದ್ಧರಗುಡಿ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	2.00	ಕಾಮಗಾರಿ ಪೂರ್ಣಗೊಂಡಿದೆ
9	ಅಮರಾವತಿ ಕ್ಯಾಂಪ್‌ಗೆ ಕಿರು ನೀರು ಸರಬರಾಜು ಯೋಜನೆ	2.00	ಕಾಮಗಾರಿ ಪೂರ್ಣಗೊಂಡಿದೆ
10	ಸಾರಿಗೆರೆ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	2.86	ಕಾಮಗಾರಿ ಪೂರ್ಣಗೊಂಡಿದೆ.

ಅನುಬಂಧ-2

ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ 2003-04ನೇ ಸಾಲಿಗೆ ಮುಂದುವರೆದಿರುವ/ ಹಮ್ಮಿಕೊಳ್ಳಲು ಉದ್ದೇಶಿಸಿರುವ ಗ್ರಾಮೀಣ ನೀರು ಸರಬರಾಜು ಯೋಜನೆಗಳ ವಿವರ

ಕ್ರ. ಸಂ.	ಯೋಜನೆ	ಪರಾ
1	ಲಕ್ಕಿನಕೊಪ್ಪ-ದೊಡ್ಡಿಬೀಳು ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	ಪ್ರಗತಿಯಲ್ಲಿದೆ
2	ಮಾಚೇನಹಳ್ಳಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	ಪ್ರಗತಿಯಲ್ಲಿದೆ
3	ಸಿದ್ಧರಹಳ್ಳಿ ಗ್ರಾಮಕ್ಕೆ ಕೊಳವೆ ನೀರು ಸರಬರಾಜು ಯೋಜನೆ	ಪ್ರಗತಿಯಲ್ಲಿದೆ
4	ಕುಸ್ಕೂರು ಆಶ್ರಯ ಕಾಲೋನಿಗೆ ಕಿರು ನೀರು ಸರಬರಾಜು ಯೋಜನೆ	ಕಾಮಗಾರಿ ಪ್ರಾರಂಭಿಸಬೇಕಾಗಿದೆ
5	ಸಿದ್ಧಮ್ಮಾಜಿ ಹೊಸೂರು ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ	ಕಾಮಗಾರಿ ಪ್ರಾರಂಭಿಸಬೇಕಾಗಿದೆ

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಮಾನ್ಯ ಉಪಾಧ್ಯಕ್ಷರೆ, ತಾವು ಉತ್ತರವನ್ನು ಒದಗಿಸಿದ್ದೀರಿ, ನನ್ನ ಕ್ಷೇತ್ರದಲ್ಲಿ ಅನೇಕ ಗ್ರಾಮಗಳಿಗೆ ತಾವು ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಕೆಲವು ಭಾಗ ಇನ್ನೂ ಕಂಪ್ಲೀಟ್ ಆಗಿಲ್ಲ, ಇನ್ನು ಕೆಲವು ಕಡೆ ಪ್ರಗತಿಯಲ್ಲಿವೆ ಎಂದು ಉತ್ತರ ಬರುತ್ತಿದೆ. ಆದಷ್ಟು ಜಾಗ್ರತೆಯಾಗಿ ಅದನ್ನು ಮುಗಿಸಬೇಕೆಂದು ಹೇಳುವುದರ ಜೊತೆಗೆ ನನ್ನ ಕ್ಷೇತ್ರದ ತುಂಗಾ ನದಿಯ ದಂಡೆಯ ಅನೇಕ ಕ

ಗ್ರಾಮಗಳಿಂದ ನೇರವಾಗಿ ನೀರನ್ನು ತೆಗೆದುಕೊಂಡು ಹೋಗಲು ಅವಕಾಶವನ್ನು ಮಾಡಿಕೊಟ್ಟರೆ ತಮ್ಮ ಇಲಾಖೆಗೆ ಈಗಾಗಲೇ ನಮ್ಮ ಏರಿಯಾ ಮ್ಯಾಪ್ ಮಾಡಿಕೊಟ್ಟಿದ್ದೇನೆ. ಇಲ್ಲಿಯವರೆಗೆ ಸರಿಯಾದ ಉತ್ತರ ಬಂದಿಲ್ಲ, ದಯವಿಟ್ಟು ಆದಷ್ಟು ಜಾಗ್ರತೆಯಾಗಿ ಮಾಡಿಕೊಟ್ಟರೆ ಇದಕ್ಕೆ ಹೆಚ್ಚಿಗೆ ಹಣವೂ ಕೂಡ ಬೇಕಾಗುವುದಿಲ್ಲ. ಕಡಿಮೆ ಹಣದಲ್ಲಿ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕಾಗುತ್ತದೆ. ಒಳ್ಳೆಯ ನೀರನ್ನು ಕೊಡಲಿಕ್ಕೆ ಅವಕಾಶವಾಗುತ್ತದೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಮಾನ್ಯ ಉಪಾಧ್ಯಕ್ಷರೆ, ಹೋದವರ್ಷ ನಾವು ಎಷ್ಟು ಯೋಜನೆಗಳನ್ನು ತೆಗೆದುಕೊಂಡಿದ್ದೇವೆ ಎನ್ನುವುದರ ಬಗ್ಗೆ ನಾನು ಎಲ್ಲಾ ಮಾಹಿತಿಯನ್ನು ಕೊಟ್ಟಿದ್ದೇನೆ. ಅದಕ್ಕೆ ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವುದನ್ನೂ ಸಹ ಕೊಟ್ಟಿದ್ದೇನೆ. ಹೆಚ್ಚಿನ ಯೋಜನೆಗಳು ಬೇಕಾದರೆ, ಆಯಾಯಾ ಜಿಲ್ಲೆ ಪಂಚಾಯಿತಿಯ ಅಕ್ಷನ್ ಪ್ಲಾನ್ ಅವರು ತೆಗೆದುಕೊಳ್ಳಬೇಕಾಗುತ್ತದೆ. ಒಂದೆರಡು ಅರ್ಜೆಂಟ್ ಇದೆ ಎಂದರೆ ನಾವು ಇಲ್ಲಿಂದ ಮಂಜೂರು ಮಾಡಬಹುದು. ಅವರು ತಮ್ಮ ಜಿಲ್ಲಾ ಪಂಚಾಯಿತಿಯ ಆಕ್ಷನ್‌ಪ್ಲಾನ್‌ನಲ್ಲಿ ಹಾಕಿಕೊಂಡು ಅವರು ಮಾಡಬಹುದು. ಒಂದುವೇಳೆ ಸರ್ ಪೇಸ್‌ವಾಟರ್ ಸ್ಕೀಂ ನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳುವುದಾದರೆ, ಸ್ವಜನಧಾರ ಸ್ಕೀಂ ಇದೆ, 10 ಪರ್ಸೆಂಟ್ ಕಾಂಟ್ರಿಬ್ಯೂಷನ್ ಹಾಕಿಕೊಂಡು ನಿಮ್ಮ ಯೋಜನೆಗಳನ್ನು ಹಾಕಿಕೊಳ್ಳಬಹುದು.

7.40 ಪಿಎಂ

ಕಾಂಟ್ರಿಬ್ಯೂಷನ್ ಎಲ್ಲಿ ಬರುತ್ತದೆ ಅಲ್ಲಿ ಎಲ್ಲರೂ ಹಿಂಜರಿಯುತ್ತಾರೆ, ಕಾಂಟ್ರಿಬ್ಯೂಷನ್ ಎಲ್ಲಿ ಇಲ್ಲ ಹಾಗೆ ಮಾಡಿಕೊಡಿ ಎಂದು ಎಲ್ಲಾ ಕಡೆಯಿಂದ ಬರುತ್ತಿದೆ, ಅದಕ್ಕೆ ಮಾನ್ಯ ಚಂದ್ರಶೇಖರ್ ರವರ ಯೋಜನೆ ಏನು ಇದೆ ಅದನ್ನು ಆದಷ್ಟು ಬೇಗ ನಿಮಗೆ ಅನುಕೂಲ ಮಾಡಿಕೊಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ : ಪ್ರಗತಿ ಎಲ್ಲಿ ಆಗಿದೆ ಅಲ್ಲಿ ಆದಷ್ಟು ಬೇಗ ಮುಗಿಸಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ : ಇರತಕ್ಕಂಥ ಅಗತ್ಯ ಯೋಜನೆಗಳು ಏನು ಇದೆಯೋ ಅವುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 6-8-2003 ರ ಲಿಖಿತ ಮೂಲಕ ಉತ್ತರಿಸುವ 108 ಪ್ರಶ್ನೆಗಳ ಪೈಕಿ 84 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು : [x]ಮಂಡಿಸಲಾಯಿತು.[x] ಅನುಬಂಧ II